## ನೀಳ್ಗತೆ

ಹಿಂದೆ ಆಕೆಯ ಸ್ನೇಹವಾಗಿ ಒಂದೆರಡು ವರ್ಷ ಸಂಬಂಧ ಇಟ್ಟುಕೊಂಡಿದ್ದರಂತೆ. ಆ ಋಣಕ್ಕಾಗಿ ಅದನ್ನು ಬರೆದುಕೊಟ್ಟು ಆ ವಿಷಯವನ್ನೂ ಮರೆತು ಬಿಟ್ಟಿದ್ದರಂತೆ. ಇತ್ತೀಚೆಗೆ ಅವರಿಗೆ ಮರೆವಿನ ಕಾಯಿಲೆ ಅಲ್ಜೀಮರ್ ಕೂಡ ಅಧಿಕವಾಗುತ್ತಿದೆ. ಎನಿವೇಸ್ ಡೋಂಟ್ ಲೂಸ್ ಹಾರ್ಟ್..." ಒಂದು ರೀತಿಯ ವ್ಯಂಗ್ಯಭರಿತವಾಗಿದ್ದವು ವಿಶ್ವನಾಥ ವೇಮುಲಶಾಸ್ತ್ರಿಯ ಮಾತುಗಳು! ಅದಾದ ಹತ್ತು ನಿಮಿಷಗಳಿಗೆ ಮತ್ತೆ ಫೋನು ರಿಂಗಾಗಿತ್ತು. ಅನ್ನೋನ್ ನಂಬರ್. ಲಿಫ್ಟ್ ಮಾಡಲೋ ಬೇಡವೋ ಎಂದುಕೊಳ್ಳುತ್ತಲೇ, "ಹಲೋ..." ಎಂದಿದ್ದೆ. ಆ ಕಡೆಯಿಂದ ತಣ್ಣನೆಯ ಹೆಣ್ಣಿನ ಧ್ವನಿ. "ನೀವು ನಮ್ಮ ಸೈಟ್ ಹತ್ತಿರ ಹೋಗಿದ್ದಿರಂತೆ. ಅದನ್ನು ನರಸಿಂಹರೆಡ್ಡಿಯವರ ಅಣ್ಣ ವೀರಾಂಜನೇಯರೆಡ್ಡಿಯವರು ನನ್ನ ಹೆಸರಿಗೆ ಎಂಟು ವರ್ಷಗಳ ಹಿಂದೆಯೇ ಕ್ರಯ ಮಾಡಿಕೊಟ್ಟಿದ್ದಾರೆ. ಆ ನರಸಿಂಹರೆಡ್ಡಿ ಇದ್ದಾರಲ್ಲಾ ಮಹಾನುಭಾವ... ನಾನಲ್ಲದೆ, ನನ್ನ ತಂಗಿಯನ್ನೂ ಬಿಡಲಿಲ್ಲ. ಚೆನ್ನಾಗಿ ನೋಡಿಕೊಂಡಿದ್ದರಲ್ಲದೆ, ಆತನ ಒರಟುತನದ ಸುಖವನ್ನೂ ಅನುಭವಿಸಿದ್ದೇನೆ ಬಿಡಿ ಅದರ ಕಥೆ ಬೇರೆ. ಸದ್ಯ ಒಳ್ಳೆಯ ಗಂಡು ನೋಡಿ ಅವರೇ ಮದುವೆ ಮಾಡಿಸಿದ್ದರು. ನನ್ನ ಗಂಡನಿಗೂ ಎಲ್ಲಾ ವಿಷಯ ಗೊತ್ತು. ಬ್ಲಾಕ್‌ಮೇಲ್ ಮಾಡೋಣ ಅಂತ ಯೋಚಿಸ್ತಿದ್ರೆ ಇರ್ಲಿ ಅಂತ ಹೇಳ್ದೆ ಅಷ್ಟೇ. ವಾರದ ಹಿಂದೆ ಜಮೀನನ್ನು ಜಾಯಿಂಟ್ ಡೆವಲಪ್‌ಮೆಂಟ್‌ಗೆ ಅಗ್ರಿಮೆಂಟ್ ಮಾಡಿಕೊಟ್ಟಿದ್ದೀವಿ. ಮುಂದಿನ ತಿಂಗಳು ಅಪಾರ್ಟ್‌ಮೆಂಟ್ ಕಟ್ಟುವ ಕೆಲಸ ಶುರುವಾಗ್ತಿದೆ. ಸುಮ್ಮನೆ ತರಲೆ ಮಾಡಲಿಕ್ಕೆ ಪ್ರಯತ್ನ ಮಾಡಬೇಡಿ..." ಎಂದು ಮಾತನಾಡಿ ಫೋನ್ ಕಟ್ ಮಾಡಿದ್ದರು. ಬ್ಯಾಗಿನಲ್ಲಿದ್ದ ದಾನಪತ್ರವನ್ನು ತೆಗೆದು ಹರಿದು ಕಸದಬುಟ್ಟಿಗೆ ಹಾಕಿದ್ದೆ. ಡಾಕ್ಟರ್ ಜೀಮೂತವಾಹನನಿಗೆ ಫೋನು ಮಾಡಬೇಕೆನಿಸಿತು. ಅವನು ಬಿಜಿಯಾಗಿರಬಹುದು, ರಾತ್ರಿಗೆ ಮಾಡಿದರಾಯಿತು ಎಂದು ಮನಸ್ಸು ಬದಲಿಸಿಕೊಂಡೆ. ಇವೊತ್ತು ರಾತ್ರಿ ಇನ್ನೆಂಥ ಭೀಕರ ಕನಸು ಬೀಳುತ್ತದೋ ಎಂಬ ಭಯದಲ್ಲಿ ಮುಳುಗಿ ನನ್ನ ಮೆದುಳು ಬ್ಲಾಂಕ್ ಆಗತೊಡಗಿ ಹಾಗೆಯೇ ಹಾಸಿಗೆಯ ಮೇಲೆ ಉರುಳಿದ್ದೆ. ನಾನು ಮಲಗಿದ್ದ ಮಂಚವನ್ನು ಯಾರೋ ಹೊತ್ತು ನಡೆಯುತ್ತಿದ್ದರು!

### ಕೇಶವರೆಡ್ಡಿ ಹಂದ್ರಾಳ

ಕನ್ನಡದ ಪ್ರಸಿದ್ಧ ಮತ್ತು ಮಹತ್ವದ ಕತೆಗಾರ ಕೇಶವರೆಡ್ಡಿ ಹಂದ್ರಾಳ ಓದುಗರನ್ನು ದಶಕಗಳ ಕಾಲ ಹಿಡಿದಿಟ್ಟುಕೊಂಡ ಲೇಖಕ. 'ಹಂದ್ರಾಳ', 'ಅಂತಃಪುರ', 'ಬರದ ನಾಡಿನಲ್ಲಿ ಬೆಳದಿಂಗಳು', 'ಜಡೆಗೆ ಗುಲ್‌ಮೊಹರ್ ಕೈಗಳು', 'ಒಂದು ಹಿಡಿ ಮಣ್ಣು', 'ಬಾರಕ್ಕ ಬೆಳದಿಂಗಳೆ', 'ಈ ಕ್ಷಣದ ಬುದ್ಧ' ಅವರ ಕೆಲವು ಕಥಾಸಂಗ್ರಹಗಳು. 'ಒಕ್ಕಲ ಒನಪು', 'ಮರೆತ ಭಾರತ'– ಪ್ರಬಂಧ ಸಂಕಲನಗಳು. ಸಿನಿಮಾ, ಧಾರಾವಾಹಿಗಳಿಗೆ ಕಥೆ, ಸಂಭಾಷಣೆ ಬರೆದಿದ್ದಾರೆ. 'ನನ್ನ ಕ್ರಾಂತಿಯ ಹುಡುಗಿ' ಅವರ ಕವನ ಸಂಗ್ರಹ. ಈತನಕ 15 ಪುಸ್ತಕಗಳನ್ನು ಪ್ರಕಟಿಸಿದ್ದಾರೆ.